# 1

# ಸಂಪ್ರದಾಯಗಳು ಮತ್ತು ಪದ್ಧತಿಗಳು

*"ನೀವು ಎಲ್ಲಾದರಲ್ಲಿಯೂ ನನ್ನನ್ನು ಜ್ಞಾಪಕಮಾಡಿಕೊಂಡು ನಾನು ನಿಮಗೆ ತಿಳಿಸಿಕೊಟ್ಟ ಕಟ್ಟಳೆಗಳನ್ನು ಅನುಸರಿಸಿ ನಡೆಯುತ್ತೀರೆಂದು ನಿಮ್ಮನ್ನು ಹೊಗಳುತ್ತೇನೆ " (1 ಕೊರಿಂಥ 11:2).*

ನಾವು ಬೈಬಲಿನ ಯಾವುದೇ ವಿಷಯಗಳನ್ನು ಗಣನೆ ಮಾಡಬೇಕಾದರೆ, ನಾವು ಅದರ ಮೂಲ ಭಾಷೆಯನ್ನು, ಪದಗಳ ಅರ್ಥವನ್ನೂ, ವ್ಯಾಕರಣವನ್ನೂ, ಹಾಗೂ ವಿಷಯ ಭಾಗದ ಹಿನ್ನೆಲೆಯನ್ನೂ ಅರ್ಥಮಾಡಿಕೊಳ್ಳಬೇಕು. ಈ ಆಯುಧಗಳ ಮೂಲಕವಾಗಿ ಯೋಚನೆಗಳನ್ನು ವಿಚಾರಗಳನ್ನು ಸ್ಪಷ್ಟಪಡಿಸಿಕೊಳ್ಳಬಹುದು. ಪೌಲನು ಬರೆದಿರುವದೇನೆಂದರೆ,

> ಮನುಷ್ಯನ ಒಳಗಿನ ಆಲೋಚನೆಗಳು ಅವನಲ್ಲಿರುವ ಜೀವಾತ್ಮಕ್ಕೆ ಹೊರತು ಮತ್ತಾರಿಗೆ ತಿಳಿಯುವದು? ಹಾಗೆಯೇ ದೇವರ ಆಲೋಚನೆಗಳನ್ನು ದೇವರ ಆತ್ಮನೇ ಹೊರತು ಬೇರೆ ಯಾರೂ ಗ್ರಹಿಸುವದಿಲ್ಲ. ನಾವು ಪ್ರಾಪಂಚಿಕ ಆತ್ಮವನ್ನು ಹೊಂದದೆ ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು ತಿಳುಕೊಳ್ಳುವದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು. ಇವು ಗಳನ್ನು ಮಾನುಷಜ್ಞಾನವು ಕಲಿಸಿದ ಮಾತುಗಳಿಂದ ಹೇಳದೆ ದೇವರಾತ್ಮನೇ ಕಲಿಸಿಕೊಟ್ಟ ಮಾತುಗಳಿಂದ ಹೇಳಿ ಆತ್ಮಸಂಬಂಧವಾದವುಗಳನ್ನು ಆತ್ಮನಿಗೆ ಯುಕ್ತವಾದ ರೀತಿಯಲ್ಲಿ ವಿವರಿಸುತ್ತೇವೆ (1 ಕೊರಿಂಥ 2:11-13).

ಈ ವಾಕ್ಯಭಾಗದಲ್ಲಿ ಇರುವ ಎರಡು ಪ್ರಾಮುಖ್ಯ ನಿಯಮಗಳು ಕ್ರೈಸ್ತ ಸ್ತ್ರೀಯ ಕುರಿತಾಗಿ ಧ್ಯಾನ ಮಾಡಲು ಅನುಕೂಲವಾಗಿರುತ್ತದೆ. ಮೊದಲನೆಯದಾಗಿ, ದೇವರ ಮನಸ್ಸನ್ನು "ಅರಿಯುವ" ಹಾಗೆ, ದೇವರಾತ್ಮ ಪ್ರೇರಿತರಾದ ಪುರುಷರಿಗೆ ತನ್ನ ಆಲೋಚನೆಗಳನ್ನು ಪ್ರಕಟಮಾಡಿದ್ದಾನೆ. 1 ಕೊರಿಂಥ 2:12 ಗ್ರೀಕ್ ಭಾಷೆಯಲ್ಲಿ "ಅರಿವು" ಎಂಬ ಪದವನ್ನು *ಗಿನೋಸ್ಕೋ* ಎಂದು ಕರೆಯುವದಿಲ್ಲ. ಅದರ ಅರ್ಥ ಅನುಭವದಿಂದಲೂ, ಕಾರಣಗಳಿಂದಲೂ ಉದ್ಭವಿಸುವಂಥ ಜ್ಞಾನ ಎಂಬುದಾಗಿ ಗ್ರೀಕ್ ಭಾಷೆಯ ಪದ *ಈಡೋಮೇನ್,* ದೃಷ್ಟಿಸುವದು ಅಥವಾ ತಿಳಿಯುವದು. ಎಂಬುದಾಗಿ ಎರಡನೆಯದಾಗಿ, ದೇವರು ಲೋಗೋಸ್, ಎಂಬ "ಪದಗಳನ್ನು" ಉಪಯೋಗಿಸಿರುವನು (1 ಕೊರಿಂಥ 2:13), ಆತನ ಆಲೋಚನೆಯ ಪ್ರಕಟನೆ ಅಥವಾ ಆತನ ಸಂದೇಶ ಎಂಬುದಾಗಿ ನಾವು ಕೇವಲ ಮಾನುಷಜ್ಞಾನದಿಂದ ಉದ್ಭವವಾಗುವ ಬುದ್ಧಿಯಿಂದ ದೇವರ ಸಂದೇಶವನ್ನಾಗಲೀ ಅಥವಾ ತಿಳುವಳಿಕೆಯನ್ನಾಗಲಿ ಗ್ರಹಿಸಿಕೊಳ್ಳಲು ಸಾಧ್ಯವಿಲ್ಲ. ಅದು "ಪದಗಳ" ಅರ್ಥಗಳ ಮೂಲಕ, ದೇವರೇ ಪ್ರಕಟಿಸಿರುವ ಸಾಧನದಿಂದ ಅರ್ಥ ಮಾಡಿಕೊಳ್ಳಲು ಸಾಧ್ಯವಿದೆ.

ದೇವರು ತನ್ನ "ವಾಕ್ಯಗಳ" ಮೂಲಕ ತನ್ನ ಯೋಚನೆಗಳನ್ನು ಗೋಚರ ಪಡಿಸಿರುವ ಕಾರ್ಯವನ್ನು ಅವಲಂಬಿಸಿಕೊಂಡು, ಆತನು ಪ್ರಕಟಿಸಿರುವ "ವಾಕ್ಯಗಳ" ಮೂಲಕವಾಗಿ ಸತ್ಯಾಂಶಗಳನ್ನು "ಅರಿತುಕೊಳ್ಳಬೇಕು." ಆದುದರಿಂದ ಸ್ತ್ರೀಯರ ಕುರಿತಾದ ದೇವರ ಚಿತ್ತದ ಅಧ್ಯಾಯನವನ್ನು ಮಾಡಲು, ಪದಗಳ ಅಧ್ಯಾಯನವು ನಮಗೆ ಅವಶ್ಯವಾ ಗಿರುತ್ತದೆ.

## ಸಂಪ್ರದಾಯ ಹಾಗೂ ಲಿಂಗಗಳ ಪಾತ್ರ

ದೇವರ ಯೋಜನೆಯಲ್ಲಿ, ಸ್ತ್ರೀಯರ ಸ್ಥಾನಮಾನವನ್ನು ಕುರಿತು ಚರ್ಚಿಸುವಾಗ, "ಸಂಪ್ರದಾಯದ ಕಾರ್ಯಗಳನ್ನು" ಮತ್ತು ಸಂಪ್ರದಾಯಗಳನ್ನು ಪುನಃ, ಪುನಃ ನೆನಪುಮಾಡಲಾಗುತ್ತದೆ. "ಸಂಪ್ರದಾಯ" ಮತ್ತು "ಸಂಪ್ರದಾಯಕ್ಕೆ ಒಳಪಟ್ಟು" ಎಂಬ ವಿಷಯವನ್ನು, ಒಂದು ಸಂತಾನದಿಂದ, ಇನ್ನೊಂದು ಸಂತಾನಕ್ಕೆ ಮುಂದುವರಿಸಲಾದ ಕಟ್ಟುಪಾಡುಗಳು ಎಂದು ತಿಳುಕೊಳ್ಳಲಾಗಿದೆ. ಸಮಾಜದಲ್ಲಿನ ಕೆಲವು ಆಂತರಿಕ ಗುಂಪುಗಳು ಈ ಕಟ್ಟುಪಾಡುಗಳನ್ನು ಇತರರ ಮೇಲೆ ಹಾಕುವಂಥವರಾಗಿರುತ್ತಾರೆ.

ಬೈಬಲಿನ ನೇರದೃಷ್ಟಿಯಲ್ಲಿ, "ಸಂಪ್ರದಾಯದಲ್ಲಿ" ಕೆಟ್ಟವೂ ಹಾಗೂ ಒಳ್ಳೆಯವೂ ಸೇರಿದೆ ಎಂದು ಹೇಳುವದಿಲ್ಲ. ಆದರೆ ಅದು "ಸಂಪ್ರದಾಯ" ಎಂಬುದಾಗಿ ತಿಳಿಯಲ್ಪಟ್ಟಿದೆಯೋ, ಅಥವಾ ಇಲ್ಲವೋ ಎಂದು ಅರಿತುಕೊಳ್ಳಬೇಕು. ಬೈಬಲಿನಲ್ಲಿ "ಸಂಪ್ರದಾಯ" ಎಂಬ ಪದವು (ಗ್ರೀಕ್ ಭಾಷೆಯಲ್ಲಿ.: *ಪಾರಾದೋಸಿಸ್*) ಅಂದರೆ "ವರ್ಗಾಯಿಸಲ್ಪಟ್ಟದ್ದು" ಎಂಬ ಅರ್ಥವನ್ನು ನೀಡುತ್ತದೆ. ಈಗ ಮೊದಲನೆಯ ಪ್ರಶ್ನೆ "ಅದನ್ನು ಯಾರು ವರ್ಗಿಕರಿಸಿದರು?" ಅದು ದೇವರಿಂದ ಬಂದಿತೋ ಅಥವಾ ಮನುಷ್ಯರಿಂದ ಬಂದಿತೋ? ಎರಡನೆಯ ಪ್ರಶ್ನೆ "ದೇವರು ಇದನ್ನು ಮಾಡಲೇಬೇಕಾದ ನಿಯಮವೆಂದು ಮಾಡಿದ್ದಾನೋ?" ಆದರೆ ದೇವರ ದೃಷ್ಟಿಯಲ್ಲಿ ಸಂಪ್ರದಾಯದ ಕಾರ್ಯಗಳನ್ನು ದೇವರು ನಿಯಮವೆಂದು ಮಾಡಿರದೆ, ಅದನ್ನು ತಟಸ್ಥವಾಗಿ ಇರಿಸಿದ್ದಾನೆ. ದೇವರ ಜನಾಂಗಗಳು ಕುಟುಂಬಗಳು, ಸಂಘಗಳು, ಶಾಲೆಗಳು, ಸಭೆಗಳು ಮತ್ತು ಇತರೆ ಗುಂಪುಗಳು ದೇವರ ವಾಕ್ಯಗಳನ್ನು ಪ್ರತ್ಯೇಕವಾದಂತಹ ಸಂಪ್ರದಾಯಗಳನ್ನು ಹೊಂದಿರಬಹುದು.

ಯಾವುದೇ *ಪಾರಾದೋಸಿಸ್* - "ಸಂಪ್ರದಾಯಗಳು" ಅಥವಾ "ಸಂಸ್ಕಾರಗಳು" - ದೇವರಿಂದಲೇ ಬಂದಂತ ಕಾರ್ಯಗಳು, ಪ್ರೇರಣೆಯಿಂದ ಬೈಬಲನ್ನು ಬರೆದ ದೇವ ಜನರ ಮೂಲಕವಾಗಿ ಪ್ರಕಟಗೊಂಡವು. ಆದಿ ಕ್ರೈಸ್ತರು ಅದನ್ನು ಆಚರಣೆ ಮಾಡಿದರು, ಮತ್ತು ಈಗಲೂ ಅದರ ಆಚರಣೆಗಳುಂಟು (1 ಕೊರಿಂಥ 11:2; 2 ಥೆಸಲೋನಿಕ 2:15; 3:6). ಈ ಕಟ್ಟಳೆಗಳ ಕುರಿತಾಗಿ ಯಾರೂ ಹಗುರವಾಗಿ ಯೋಚಿಸಬಾರದು. ದೇವರ ಅಪ್ಪಣೆಗಳನ್ನು ಪಾಲಿಸುವದಕ್ಕೆ ಅಡ್ಡಿಮಾಡುವ ಯಾವುದೇ, ಮನುಷ್ಯರ ಸಂಪ್ರದಾಯಗಳನ್ನು ಆಚರಣೆ ಮಾಡಬಾರದು (ಮತ್ತಾಯ 15:3-9; ಮಾರ್ಕ 7:6-13; ಕೊಲೊಸ್ಸೆ 2:8).

ಸಂಪ್ರದಾಯಗಳನ್ನು ಈ ಕೆಳಕಂಡ ಪರೀಕ್ಷೆಗೆ ಒಳಪಡಿಸಬೇಕು. (1) ಈ ಸಂಪ್ರದಾಯವು ಯೇಸುವಿನಿಂದ ವರ್ಗಾಹಿಸಲ್ಪಟ್ಟಿದೆಯೋ? ಹಾಗಾದರೆ, ನಾವು ಅದನ್ನು ಆಚರಿಸಬೇಕು (ಮತ್ತಾಯ 28:20). (2) ಈ ಆಚರಣೆಯನ್ನು ದೇವರು ಖಂಡಿಸಿದ್ದಾನೋ? (ಉದಾಹರಣೆಗೆ, 1 ಯೋಹಾನ 5:21ನ್ನು ನೋಡಿರಿ.) ಹಾಗಾದರೆ, ಅದನ್ನು ತಿರಸ್ಕರಿಸಬೇಕು. (3) ಈ ಆಚರಣೆಯಲ್ಲಿ ಆಯ್ಕೆಗೆ ಅವಕಾಶವಿದೆಯೋ? ಹಾಗಾದರೆ, ಆಯ್ಕೆಯು ನಿರ್ಬಂಧಕ್ಕೊಳಗಾಗಿದೆ. (ಇಬ್ರೀಯ 7:12-14ನ್ನು ನೋಡಿರಿ.) ದೇವರ ಈ ಆಯ್ಕೆಗೆ ಕಟ್ಟುಪಾಡುಗಳು ಇಲ್ಲದಿದ್ದರೆ, ಆತನ ವಾಕ್ಯಕ್ಕೆ ಯಾವುದೇ ಅರ್ಥವಿರುವದಿಲ್ಲ. ಈ ರೀತಿಯ ಯಾವುದೇ ನಿದರ್ಶನಗಳನ್ನು ಬೈಬಲಿನಲ್ಲಿ, ನಾವು ಕಾಣುವಾಗ ಅದನ್ನು ಒಳ್ಳೆಯದೆಂದು ತಿಳಿದು, ಮನುಷ್ಯನ ಸಂಪ್ರದಾಯ ಉತ್ತಮವೆಂದು ಪರಿಗಣಿಸಿ, ಗೌರವಿಸಬೇಕು. (4) ದೇವರು ನಿರ್ದಿಷ್ಟವಾದಂತಹ ಆಯ್ಕೆಯನ್ನು ಮಾಡದೆ ಹೋಗಿದ್ದರೆ, ಸಂಪ್ರದಾಯದ ಕುರಿತಾಗಿ ಉದ್ಭವಿಸುವ ಆಯ್ಕೆಯ ವಿಷಯವನ್ನು ಒಪ್ಪಿಕೊಳ್ಳಲು, ಅಥವಾ ಒಪ್ಪದೆ ಇರಲು, ನಮಗೆ ಸ್ವಾತಂತ್ರವಿರುತ್ತದೆ. (ರೋಮಾಪುರ 14:2, 3ನ್ನು ನೋಡಿರಿ.)

## ಸ್ತ್ರೀ ಮತ್ತು ಪುರುಷರ ಪಾತ್ರಗಳು

ನಮ್ಮ ಸಮಾಜದಲ್ಲಿ ಸ್ತ್ರೀಪುರುಷರು ಹೊಂದಿರುವ ಸಂಪ್ರದಾಯಗಳು, ಸಮಯಕ್ಕೆ

ಅನುಗುಣವಾಗಿಯೂ ಸ್ಥಳಗಳಿಗೆ ಅನುಗುಣವಾಗಿಯೂ ಬದಲಾಗುತ್ತಾ ಇರುತ್ತವೆ. ಆದರೆ ಕೆಲವು ಸಂಪ್ರದಾಯಗಳು, ಸ್ತ್ರೀಪುರುಷರಲ್ಲಿ, ಮಾನಸಿಕವಾಗಿಯೂ ಭಾವನಾತ್ಮಕ ವಾಗಿಯೂ ಇರುವದಿಂದ, ಅವುಗಳ ಪಾತ್ರಗಳು ಬದಲಾಗುವದೇ ಇಲ್ಲ. ಕೆಲವು ವಿಷಯಗಳಲ್ಲಿ ಸ್ತ್ರೀಪುರುಷರಿಬ್ಬರೂ ಒಂದೇ ಆಗಿದ್ದರೂ, ಇನ್ನಿತರ ವಿಷಯಗಳಲ್ಲಿ ವ್ಯತ್ಯಾಸ ಹೊಂದಿರುತ್ತಾರೆ. ದೇವರೇ ಅವರನ್ನು ಈ ವಿಧವಾಗಿ ಸೃಷ್ಟಿ ಮಾಡಿರುತ್ತಾನೆ. ಅವರ ಪಾತ್ರಗಳ ಯೋಜನೆಯನ್ನು ಮತ್ತು ಅವರ ಪರಸ್ಪರ ಸಂಬಂಧವನ್ನೂ ದೇವರೇ ತಿಳಿದವನಾಗಿರುತ್ತಾನೆ.

ಸ್ತ್ರೀ ಪುರುಷರಲ್ಲಿ ವ್ಯತ್ಯಾಸಗಳಿದ್ದರೂ ಸಹ, ಅವರಿಗೆ ನಿರ್ದಿಷ್ಟವಾದ ಜವಾಬ್ದಾರಿಗಳಿರುತ್ತವೆ, ಮತ್ತು ಅವರ ಯೋಗ್ಯತೆಗಳ ಮೇಲೆ ದೇವರ ಭಾವನೆಗಳು ಪರಿಣಾಮ ಬೀರುವದಿಲ್ಲ. ಹಾಗೂ ಅವರು ದೇವರ ದೃಷ್ಟಿಗೆ ಸಮಾನಾಂತರದಲ್ಲಿರುವರು, ಅವರ ಸ್ವಭಾವಕ್ಕೆ ತಕ್ಕ ಹಾಗೆ ಅವರಿಗೆ ಜವಾಬ್ದಾರಿಗಳಿರುತ್ತವೆ.

## ಸಂಪ್ರದಾಯಗಳು ಹಾಗೂ ಪದ್ಧತಿಗಳು

ಪದ್ಧತಿಗಳು ಹಾಗೂ ಸಂಪ್ರದಾಯಗಳು ಸಾಮಾನ್ಯವಾಗಿ ಒಂದೇ ಆಗಿರುತ್ತವೆ. ಹೇಳಿಕೆಯಲ್ಲಿ ಸಮಾನಾದ ಅರ್ಥಗಳಿರುತ್ತದೆ: "ಪದ್ಧತಿ" ನಿರ್ದಿಷ್ಟ ಜನರಲ್ಲಿ ಹಾಗೂ ನಿರ್ದಿಷ್ಟ ವಾದ ಸ್ಥಳದಲ್ಲಿ[1] ಆಚರಣೆ ಮಾಡುವ ಸಂಗತಿಯು "ಪದ್ಧತಿ" ಎಂಬುದಾಗಿರುತ್ತದೆ. "ಒಂದು ಸಂಸ್ಕೃತಿಯನ್ನು ಒಂದು ತಲೆ ಮಾರಿನಿಂದ,[2] ಇನ್ನೊಂದು ತಲೆ ಮಾರಿಗೆ ಬಾಯಿ ಮಾತಿನಿಂದ ವರ್ಗಾಯಿಸುವದು" "ಸಂಪ್ರದಾಯವಾಗಿರುತ್ತದೆ." ಒಂದು ಸಂಸ್ಕೃತಿ ಅಥವಾ ಸಮಾಜದಲ್ಲಿ ಇರುವ ಆಚರಣೆ ಅಥವಾ ನಿಯಮಗಳು ಪದ್ಧತಿಯಲ್ಲಿ ಸೇರ್ಪಟ್ಟಿರುತ್ತದೆ. ಅವುಗಳನ್ನು ಸಾಮಾನ್ಯವಾಗಿ ಮಾಡಿರುತ್ತಾರೆ. ಯಾಕೆಂದರೆ ಸಂಪ್ರದಾಯವನ್ನು ಒಂದು ತಲೆಮಾರಿನಿಂದ ಇನ್ನೊಂದಕ್ಕೆ ವರ್ಗಾಯಿಸುತ್ತಾರೆ.

ಪದ್ಧತಿಗಳ ಕುರಿತಾದ ದೈವೀಕ ಶಾಸ್ತ್ರದ ನೋಟವು, ಈ ಕೆಳಕಂಡ ನಿಯಮಗಳಿಗೆ ಒಳಪಟ್ಟಿರುತ್ತದೆ:

(1) ಸಭೆಗಳು ಸಮಾಜದ ಕೆಲವು ಬಂಧನಗಳಿಗೆ ಒಳಗಾಗಿರುವದರಿಂದ ಕೆಲವು ಪದ್ಧತಿಗಳನ್ನು ಆಚರಣೆ ಮಾಡಬೇಕಾಗುತ್ತದೆ. NASB ಬೈಬಲ್ 1 ಪೇತ್ರ 2:13, 14 ಇದರ ಅರ್ಥವನ್ನು ಪ್ರಕಟ ಮಾಡಿರುತ್ತದೆ: "ಮನುಷ್ಯರು ನೇಮಿಸಿರುವ ಯಾವ ಅಧಿಕಾರಕ್ಕಾದರೂ ಕರ್ತನ ನಿಮಿತ್ತ ಅಧೀನರಾಗಿರಿ. ಅರಸನು ಸರ್ವಾಧಿಕಾರಿ ಎಂತಲೂ ಬೇರೆ ಅಧಿಪತಿಗಳು ಕೆಟ್ಟ ನಡತೆಯುಳ್ಳವರನ್ನು ದಂಡಿಸುವದಕ್ಕೂ ಒಳ್ಳೆ ನಡತೆಯುಳ್ಳವರನ್ನು ಪ್ರೋತ್ಸಾಹಪಡಿಸುವದಕ್ಕೂ ಅರಸನಿಂದ ಕಳುಹಿಸಲ್ಪಟ್ಟವರೆಂತಲೂ ತಿಳಿದು ಅವರಿಗೆ ಅಧೀನರಾಗಿರಿ." ಒಬ್ಬ ಕ್ರೈಸ್ತನು ಮಾನವ "ಅಧಿಕಾರಕ್ಕೆ" ಒಳಪಡಬೇಕು (ಗ್ರೀಕ್.: *ಕ್ಟಿಸಿಸ್;* ಅಕ್ಷರಶಃ ಅರ್ಥ "ಸೃಷ್ಟಿ"). ಇದು ಮನುಷ್ಯನು ನಿರ್ಮಾಣ ಮಾಡಿದ ನಿಯಮಗಳನ್ನು ಹಾಗೂ ಪದ್ಧತಿಗಳನ್ನು ಒಳಗೊಂಡಿರುತ್ತದೆ. ಹೇಗೂ ಇವುಗಳು ದೇವರ ನಿಭಂಧನೆಗಳನ್ನು ಮುರಿಯಬಾರದು (ಅಪೊಸ್ತಲರ ಕೃತ್ಯಗಳು 5:29 ನೋಡಿರಿ).

(2) ನಾವು ಜೀವಿಸುತ್ತಿರುವ ಸ್ಥಳದಲ್ಲಿ ಇರುವ ಸಂಸ್ಕೃತಿಗನುಗುಣವಾಗಿ, ಕ್ರೈಸ್ತರು ಕೆಲವು ಪದ್ಧತಿಗಳನ್ನು ಆಚರಣೆ ಮಾಡಬೇಕು. ಈ ಸಂಸ್ಕೃತಿಯು ಬೇರೆ ಸಂಸ್ಕೃತಿಯವರಿಗೆ ಲಾಭದಾಯಕವಲ್ಲದಿದ್ದರೂ, ತಾವು ವಾಸಮಾಡುತ್ತಾ ಇರುವಂತ ಸಮಾಜದಲ್ಲಿ ಇದು ದೇವರ ಸೇವೆಗೆ ಅನುಕೂಲವಾಗುತ್ತದೆ. ಪೌಲನು ಅನ್ಯರ ನಡುವೆ ಅನ್ಯನಂತೆ ಇದ್ದನು; ಯೆಹೂದ್ಯರ ಜೊತೆಯಲ್ಲಿರುವಾಗ ಅವರ ಪದ್ಧತಿಗಳನ್ನು ಅನುಕರಣೆಮಾಡಿದನು (1 ಕೊರಿಂಥ 9:20). ಅವನು ಯಾವುದೇ ಪದ್ಧತಿಯನ್ನು ನೆರವೇರಿಸಿದರೂ, ಕ್ರಿಸ್ತನ ಬೋಧನೆಗಳನ್ನು ಮಾತ್ರ ಉಲ್ಲಂಘನೆ ಮಾಡಲಿಲ್ಲ (1 ಕೊರಿಂಥ 9:21).

ತಿಮೊಥೆಯನಿಗೆ ಸುನ್ನತಿ ಮಾಡಿಸುವ ವಿಷಯದಲ್ಲಿಯೂ, ತೀತನಿಗೆ ಸುನ್ನತಿ ಮಾಡಿಸದ

ವಿಷಯದಲ್ಲಿಯೂ, ಪೌಲನು ಆಚರಣೆ ಮಾಡಿದ ದೃಷ್ಟಾಂತವನ್ನು ವಿವರಿಸಲಾಗಿದೆ. ಯೆಹೂದ್ಯರಿಗೆ ಸುವಾರ್ತೆಯ ವಿಷಯದಲ್ಲಿ ಯಾವುದೇ ಅಡಚಣೆ ಉಂಟಾಗದಂತೆ, ಯೆಹೂದ್ಯ ತಾಯಿಯನ್ನೂ ಗ್ರೀಕ್ ತಂದೆಯನ್ನು ಹೊಂದಿದ್ದ ತಿಮೊಥೆಯನಿಗೆ ಸುನ್ನತಿ ಮಾಡಿಸಿದನು (ಅಪೊಸ್ತಲನ ಕೃತ್ಯಗಳು 16:3). ಯಾವುದೇ ಯೆಹೂದ್ಯರ ಹಿನ್ನೆಲೆಯನ್ನು ಹೊಂದದ; ತೀತನಿಗೆ ಸಭೆಯು ಸುನ್ನತಿ ಮಾಡದಂತೆ ತಡೆ ಹಿಡಿದನು. ತೀತನ ಸ್ವಾತಂತ್ರಕ್ಕೆ ಸಭೆಯು ಧಕ್ಕೆ ತರದಂತೆ ಕಾರ್ಯನಿರ್ವಹಿಸಿದನು (ಗಲಾತ್ಯ 2:3-5). ಒಂದು ವೇಳೆ ಪೌಲನು ಸುನ್ನತಿ ಇಲ್ಲದವನ ಸಂಗಡ ಪ್ರಯಾಣ ಮಾಡುತ್ತಿದ್ದರೆ, ಯೆಹೂದ್ಯರು ಸುವಾರ್ತೆಯನ್ನು ಕೇಳುತ್ತಿರಲಿಲ್ಲ, ಆ ಅವಕಾಶವನ್ನು ಪಡೆದುಕೊಳ್ಳಲು ಪೌಲನು ತಿಮೊಥೆಯನಿಗೆ ಸುನ್ನತಿ ಮಾಡಿಸಿದನು. ತೀತನಿಗೆ ಸುನ್ನತಿ ಮಾಡಿಸುವದಾಗಿದ್ದರೆ, ಪೌಲನು ತನ್ನ ಸಭೆಗಳ ಮೇಲೆ ಪದ್ಧತಿ ಗಳನ್ನು ಹೇರುವನು ಎಂದು ಸಭೆಗಳು ತಿಳಿಯಬಹುದೆಂದು ಅರಿತು ತೀತನಿಗೆ ಸುನ್ನತಿಯನ್ನು ಮಾಡಿಸಲಿಲ್ಲ.

(3) ದೇವರಿಂದ ತಡೆಹಿಡಿಯಲ್ಪಟ್ಟ ಯಾವುದೇ ಪದ್ಧತಿಯನ್ನು ಕ್ರೈಸ್ತರು ಅನುಸರಣೆ ಮಾಡಬಾರದು. ಪೌಲನು ಅನ್ಯರ ಕೆಲವು ಪದ್ಧತಿಗಳನ್ನು ಅನುಸರಣೆ ಮಾಡಿದರೂ ಸಹ, ಅನ್ಯರ ದೃಷ್ಟಿಯ ಜೀವಿತದ ಪದ್ಧತಿಗಳನ್ನು ಅವನು ಮತ್ತು ಅವನ ಜನರು ಅದನ್ನು ಅನುಸರಿಸಲು ಸಮ್ಮತಿ ನೀಡಲಿಲ್ಲ. ಪೇತ್ರನು ಬರೆದು ತಿಳಿಸಿದ್ದೇನೆಂದರೆ, "ನೀವು ಬಂಡುತನ ದುರಾಶೆ ಕುಡಿಕತನ ದುಂದೌತನ ಮದ್ಯಪಾನಗೋಷ್ಠಿ ಅಸಹ್ಯವಾದ ವಿಗ್ರಹಾರಾಧನೆ ಈ ಮೊದಲಾದವುಗಳನ್ನು ನಡಿಸುವದರಲ್ಲಿಯೂ ಅನ್ಯಜನರಿಗೆ ಇಷ್ಟವಾದ ದುಷ್ಕೃತ್ಯಗಳನ್ನು ಮಾಡುವದರಲ್ಲಿಯೂ ಕಳೆದು ಹೋದ ಕಾಲವೇ ಸಾಕು" (1 ಪೇತ್ರ 4:3). ದೇವರ ನಿಯಮಗಳನ್ನು ಉಲ್ಲಂಘನೆ ಮಾಡುವ ಪದ್ಧತಿಗಳನ್ನು ಕ್ರೈಸ್ತರು ಆಚರಣೆ ಮಾಡಬಾರದು.

(4) ಕೆಲವು ಪದ್ಧತಿಗಳು ತಟಸ್ಥವಾಗಿರುತ್ತವೆ. ಇಲ್ಲಿ ಕ್ರೈಸ್ತರು ಮಾಡಬೇಕಾದ ಕಾರ್ಯವೇ ನೆಂದರೆ ಅದನ್ನು ವಯಕ್ತಿಕವಾಗಿ ನಿರ್ದರಿಸಿಕೊಳ್ಳಬೇಕು. ಸಮಾಜದಲ್ಲಿರುವ ಪದ್ಧತಿಯ ಮೇರೆಗೆ ತಿನ್ನುವ ಆಹಾರದ ವಿಷಯದಲ್ಲಿ ಕ್ರೈಸ್ತನೇ ವಯಕ್ತಿಕವಾದ ಆಯ್ಕೆಯನ್ನು ಮಾಡಿಕೊಳ್ಳಬೇಕು: "ತಿನ್ನುವವನು ತಿನ್ನದವನನ್ನು ಹೀನೈಸಬಾರದು; ತಿನ್ನದವನು ತಿನ್ನುವವನನ್ನು ದೋಷಿ ಯೆಂದು ಎಣಿಸಬಾರದು. ದೇವರು ಇಬ್ಬರನ್ನೂ ಸೇರಿಸಿಕೊಂಡಿದ್ದಾನಲ್ಲಾ" (ರೋಮಾಪುರ 14:3). ಅವನ ಆಯ್ಕೆಯ ನಿರ್ದಾರದಿಂದ ಕ್ರಿಸ್ತನ ಕಾರ್ಯದ ಮೇಲೆ ಪರಿಣಾಮ ಉಂಟಾಗದೇ ಇದ್ದರೆ ಅವನು ಕೆಲವು ಪದ್ಧತಿಗಳನ್ನು ಆಚರಿಸುವ, ಅಥವಾ ಆಚರಿಸದೆ ಇರುವ ನಿರ್ಣಯವನ್ನು ಕೈಗೊಳ್ಳಲು ಅವನಿಗೆ ಸ್ವತಂತ್ರವಿರುತ್ತದೆ.

(5) ಕ್ರೈಸ್ತನಿಗೆ ಲಾಭದಾಯಕವಾಗುವ ಪದ್ಧತಿಗಳನ್ನು ಅನುಸರಿಸಬಹುದು. ಅದನ್ನು ಮಾಡಲೇಬೇಕು ಎಂಬ ವಿಧಿ ಇರುವದಿಲ್ಲ. ಪೌಲ ಮತ್ತು ಯೇಸು ಕ್ರಿಸ್ತನು ಇಬ್ಬರು ವಾಡಿಕೆಯ ಪ್ರಕಾರ ಸಭಾಮಂದಿರಕ್ಕೆ ಹೋದರು (ಲೂಕ 4:16; ಅಪೊಸ್ತಲರ ಕೃತ್ಯಗಳು 17:2). ಅವರಿಬ್ಬರೂ, ಆಚರಣೆ ಮಾಡಬಹುದಾದ ಒಳ್ಳೆಯ ಪದ್ಧತಿ ಇದಾಗಿತ್ತು, ಆದರೆ ಎಲ್ಲಾ ಕ್ರೈಸ್ತರು ಇದನ್ನು ಮಾಡಲೇಬೇಕು ಎಂಬ ನಿಯಮವಿಲ್ಲ.

(6) ಕ್ರೈಸ್ತರೂ ಮಾಡಲೇಬೇಕು ಎಂಬ, ದೇವರ ವಿಧಿವತ್ತಾದ ಪದ್ಧತಿಗಳು ಕೆಲವು ಸಮೂಹದಲ್ಲಿ ಇರುತ್ತವೆ. ಅವುಗಳನ್ನು ಸಮೂಹದ ಪದ್ಧತಿಗಳು ಎಂದು ಆಚರಿಸದೆ, ದೇವರೇ ಅದನ್ನು ನೇಮಿಸಿರುವದರಿಂದ, ಅದನ್ನು ಕ್ರೈಸ್ತರು ಆಚರಣೆ ಮಾಡಬೇಕಾಗುತ್ತದೆ. ಈ ಕೆಳ ಕಾಣಿಸಿದ, ಸಂಸ್ಕೃತಿಯಲ್ಲಿ ಆಚರಣೆ ಮಾಡಲಾಗುತ್ತಿರುವ ಕೆಲವು ಪದ್ಧತಿಗಳ ಉದಾಹರಣೆಯನ್ನು ನೀಡಲಾಗಿದೆ. ಅವುಗಳನ್ನು ಕ್ರೈಸ್ತರು ಸಮೂಹದಲ್ಲಿ ಮಾಡಲೇ ಬೇಕೆಂಬ ನಿಯಮಗಳಿಗೆ ಒಳಪಟ್ಟಿರುತ್ತಾರೆ.

ಎ. ಹಿರಿಯರನ್ನು ಯೆಹೂದ್ಯರ ನಾಯಕರನ್ನಾಗಿ ನೇಮಿಸಿಕೊಳ್ಳುವ ಪದ್ಧತಿಯು ಯೆಹೂದ್ಯರಲ್ಲಿ ಇರುತ್ತದೆ (ಮತ್ತಾಯ 15:2; 16:21; ಲೂಕ 22:66; ಅಪೊಸ್ತಲರಕೃತ್ಯಗಳು

4:5). ಸಭೆಗಳಲ್ಲಿ ಹಿರಿಯರನ್ನು ನೇಮಿಸುವ ನಿಯಮವಿತ್ತು (ಅಪೊಸ್ತಲರ ಕೃತ್ಯಗಳು 14:23; ತೀತ 1:5).

ಬಿ. ಯೆಹೂದ್ಯರು ವಾರಕ್ಕೆ ಒಂದು ಸಾರಿ ಸಮೂಹವಾಗಿ ಸೇರುತಿದ್ದರು (ಅಪೊಸ್ತಲರಕೃತ್ಯಗಳು 13:27; 15:21) ಕ್ರೈಸ್ತರೂ ಸಹ ಎಡಬಿಡದೇ ಸಮೂಹವಾಗಿ ಸೇರಿದ್ದರು (ಅಪೊಸ್ತಲರಕೃತ್ಯಗಳು 20:7; 1 ಕೊರಿಂಥ 16:2; ಇಬ್ರಿಯ 10:25).

ಸಿ. ಯೆಹೂದ್ಯರು ಇಬ್ಬರೂ ಇಲ್ಲವೇ ಮೂವರು ಸಾಕ್ಷಿಗಳ ಆಧಾರದಿಂದ ತೀರ್ಪು ನೀಡಬೇಕಾಗಿತ್ತು (ಧರ್ಮೋಪದೇಶ ಕಾಂಡ 17:6; ಮತ್ತಾಯ 26:60). ಕ್ರೈಸ್ತರೂ ಸಹ ಇಬ್ಬರು ಮೂವರು ಸಾಕ್ಷಿಗಳ ಬಾಯಿಂದ ಪ್ರತಿಯೊಂದು ಸಂಗತಿಯನ್ನು ಸ್ಥಾಪನೆ ಮಾಡಬೇಕಾಗಿತ್ತು (2 ಕೋರಿಂಥ 13:1; 1 ತಿಮೊಥೆ 5:19).

ಡಿ. ಯೆಹೂದ್ಯರಿಗೂ ಅನ್ಯರಿಗೂ ಮದುವೆಯ ಒಂದು ಪದ್ಧತಿಯಾಗಿತ್ತು. ಸ್ತ್ರೀ ಪುರುಷರು ಮಾತ್ರ ಮದುವೆಯ ಬಂಧನದ ಪದ್ಧತಿಯಲ್ಲಿ ಒಟ್ಟಾಗಿ ಜೀವಿಸುವದಕ್ಕೆ ದೇವರು ಅನುಮತಿಸಿದ್ದಾನೆ (ರೋಮಾಪುರ 7:2, 3; 1 ಕೊರಿಂಥ 7:2, 9).

ಇ. ಪರಿಶುದ್ಧತೆಗಾಗಿ, ಯೆಹೂದ್ಯರಲ್ಲಿ ಸ್ನಾನ ಮಾಡುವ ಮತ್ತು ತೊಳೆದುಕೊಳ್ಳುವ ಪದ್ಧತಿಯು ಆಚರಣೆಯಲ್ಲಿತ್ತು (ಮಾರ್ಕ 7:3, 4). ಯೇಸುವಿನ ರಕ್ತದಿಂದ ಶುದ್ಧವಾಗಬೇಕಿದ್ದರೆ, ದೀಕ್ಷಾಸ್ನಾನದ ಪದ್ಧತಿಯು ಅವಶ್ಯವಿತ್ತು ಇದನ್ನೇ ದೇವರು ಬಯಸುತ್ತಾನೆ (ಮಾರ್ಕ 16:16; ಅಪೊಸ್ತಲರಕೃತ್ಯಗಳು 2:38; 22:16; ಕೊಲೊಸ್ಸೆ 2:12, 13; ಎಫೆಸ 5:26).

*ಸಮಾಜದಲ್ಲಿರುವ ಕೆಲವು ಪದ್ಧತಿಗಳನ್ನು ಆಚರಣೆ ಮಾಡಲೇಬೇಕೆಂಬ ಸಿದ್ಧಾಂತವನ್ನು ದೇವರು ಬಯಸುವ ನಿಯಮವೆಂದು ಪರಿಗಣಿಸಲಾಗದು.* ಮದುವೆಯ ಬಾಂದವ್ಯಕ್ಕೂ, ಪಾಪದ ಪರಿಹಾರಕ್ಕೆ ಮಾಡಿಸಿಕೊಳ್ಳುವ ದೀಕ್ಷಾಸ್ನಾನಕ್ಕೂ, ಗಂಡ/ಹೆಂಡತಿಯರ ಪರಸ್ಪರ ಅನ್ಯೊನ್ಯಕ್ಕೂ, ಸಭೆಯಲ್ಲಿ ಸ್ತ್ರೀಯರ ಪಾತ್ರಕ್ಕೂ ಇನ್ನಿತರೆ ದೇವರು ನೇಮಿಸಿದ ಇತರೆ ಆಚರಣೆಗಳಿಗೂ ಇದು ಅನ್ವಯವಾಗುವದಿಲ್ಲ. ದೇವರು ಅಪ್ಪಣೆ ಮಾಡಿರುವಂಥ ಪದ್ಧತಿಗಳು, ಸಮುದಾಯದಲ್ಲಿರುವ ಸಂಸ್ಕೃತಿಯು ಆಚರಣೆಯಾಗಿದ್ದರೆ, ಕ್ರೈಸ್ತರನ್ನು ಕಡಿಮೆ ನಿರ್ಬಂಧದಲ್ಲಿಡುವದಿಲ್ಲ. ಹಾಗೂ ಸಮುದಾಯ ಏನು ಮಾಡುತ್ತದೆ, ಅಥವಾ ಮಾಡದೆ ಇರುತ್ತದೆ ಎಂಬುದಕ್ಕಿಂತಲೂ ದೇವರ ಅಪ್ಪಣೆಗಳು ಮಾತ್ರ ನೆರವೇರಿಸಲು ಯೋಗ್ಯವಾಗಿವೆ, ಪೌಲನು ತಿಳಿಸಿದ ಹಾಗೆ, "ಇಹಲೋಕದ ನಡವಳಿಕೆಯನ್ನು ಅನುಸರಿಸಬೇಡಿರಿ ..." (ರೋಮಾಪುರ 12:2). ಸಮುದಾಯದಲ್ಲಿರುವ ಪಾಪದ ನಡವಳಿಕೆಗಳನ್ನು ಮಾಡ ಬೇಡಿರಿ; ಎಂಬ ಅರ್ಥವೇ ವಿನಃ ಅದು ಸಂಸ್ಕೃತಿಯ ಆಚರಣೆಯಾಗಿದ್ದು ದೇವರು ಇದನ್ನು ಮಾಡಿರಿ ಎಂದು ನೀಡಿರುವ ಅಪ್ಪಣೆಯನ್ನು ಮೀರಬೇಕು ಎಂಬ ತಾತ್ಪರ್ಯವಲ್ಲ. "ಪದ್ಧತಿಯು ಸಮಯಕ್ಕನುಗುಣವಾಗಿರುವದರಿಂದ, ಒಬ್ಬ ಕ್ರೈಸ್ತರು ಅದರ ಬೋಧನೆಯನ್ನು ನಿರಾಕರಿಸಬೇಕು ಎಂಬುದಾಗಿಯೂ ಇರುವದಿಲ್ಲ."[3]

ಸ್ತ್ರೀಯ ಪಾತ್ರ ಮತ್ತು ಆಕೆಯ ಜವಾಬ್ದಾರಿಗಳ ಕುರಿತಾಗಿ ಅಭ್ಯಾಸಿಸುವಾಗ, ಬೈಬಲ್ ಸಂಸ್ಕೃತಿಯ ಕಡೆಗೆ ನಡೆಸದೆ, ದೇವರ ಸೃಷ್ಟಿಯಲ್ಲಿರುವ, ಯೋಜನೆಯ ಕ್ರಮದ ಕಡೆಗೂ ಮತ್ತು ದೇವರ ನಿಬಂಧನೆಗಳ ಕಡೆಗೂ ನಡೆಸುವಂಥದ್ದಾಗಿದೆ:

> ಪುರುಷನು ಸ್ತ್ರೀಯಿಂದ ಉತ್ಪತ್ತಿಯಾಗಲಿಲ್ಲ; ಸ್ತ್ರೀಯು ಪುರುಷನಿಂದ ಉತ್ಪತ್ತಿಯಾದಳು. ಇದಲ್ಲದೆ ಪುರುಷನು ಸ್ತ್ರೀನಿಮಿತ್ತವಾಗಿ ನಿರ್ಮಾಣವಾಗಲಿಲ್ಲ; ಸ್ತ್ರೀಯು ಪುರುಷನ ನಿಮಿತ್ತವಾಗಿ ನಿರ್ಮಾಣವಾದಳು (1 ಕೊರಿಂಥ 11:8, 9; 1 ತಿಮೋಥೆ 2:13).

> ದೇವಜನರ ಎಲ್ಲಾ ಸಭೆಗಳ ಮರ್ಯಾದೆಯ ಪ್ರಕಾರ ಸ್ತ್ರೀಯರು ಸಭೆಯ ಕೂಟಗಳಲ್ಲಿ ಸುಮ್ಮಗಿರಬೇಕು; ಮಾತಾಡುವದಕ್ಕೆ ಅವರಿಗೆ ಅಪ್ಪಣೆಯಿಲ್ಲ; ಅವರು

ಅಧೀನದಲ್ಲಿರಬೇಕು; ಧರ್ಮಶಾಸ್ತ್ರದಲ್ಲಿಯೂ ಹೀಗೆ ಹೇಳಿಯದೆಯಲ್ಲಾ (1 ಕೊರಿಂಥ 14:34).

ಸ್ತ್ರೀಯ ಪಾತ್ರಕ್ಕೆ ಪದ್ಧತಿಗಳು ಮೂಲ ಎಂಬುದಾಗಿ ಇರುವದಿಲ್ಲ.

"ಪರಿಶುದ್ಧವಾದ" ಮತ್ತು ಈ ಉದಾಹರಣೆನ್ನು ಕೆಲವರು ಪದ್ಧತಿಯೆ ವಿನಃ ಮಾಡಲೇ ಬೇಕಾದ ಸಂಗತಿಯಲ್ಲ ಎಂದು ಹೇಳುತ್ತಾರೆ. ಇದರ ಉದಾಹರಣೆಯಿಂದ, ಇತರೆ ದೇವರ ಪದ್ಧತಿಗಳನ್ನು ನಿರಾಕರಿಸಿದ್ದಾರೆ. "ಪರಿಶುದ್ಧ ಮುತ್ತಿನ" ಬಗ್ಗೆ ಈ ಹೇಳಿಕೆಯನ್ನು ನೀಡಲಾಗಿದೆ (ರೋಮಾಪುರ 16:16; 1 ಕೊರಿಂಥ 16:20; 2 ಕೊರಿಂಥ 13:12; 1 ಥೆಸಲೋನಿಕ 5:26) ಮತ್ತು "ಪ್ರೀತಿಯ ಮುತ್ತಿನ" ಬಗ್ಗೆ (1 ಪೇತ್ರ 5:14) ಯಾವ ರೀತಿ ಮುತ್ತನ್ನು ನೀಡಬೇಕು ಎಂಬ ನಿಯಮವನ್ನು ನೀಡಲಾಗಿದೆ; ಮತ್ತು ಸ್ವತಃ ಅಪ್ಪಣೆಯಾಗಿರುವದಿಲ್ಲ. ಆದರೆ ಆ ಸಮುದಾಯದಲ್ಲಿ ಸ್ವಭಾವಿಕವಾಗಿ ಅಭಿನಂಧಿಸುವಾಗ "ಮುತ್ತನ್ನು" ನೀಡುತ್ತಿದ್ದರು, ಆದುದರಿಂದ ಮುತ್ತಿನಿಂದ ಕ್ರೈಸ್ತರು ಪರಸ್ಪರ ಅಭಿನಂದಿಸಬೇಕು ಎಂದು ಪೌಲನು ಅಪ್ಪಣೆ ನೀಡುತ್ತಿರುವದಿಲ್ಲ. ಆದರೆ ಪರಸ್ಪರ "ಮುತ್ತನ್ನು" ನೀಡುವ ವಿಷಯದಲ್ಲಿ ವಿಶೇಷ ಸೂಚನೆಯನ್ನು ನೀಡಿ, ಅವರು ನೀಡುವಂಥ "ಮುತ್ತು" "ಪರಿಶುದ್ಧವಾದ" ಮುತ್ತಾಗಿರಬೇಕು. "ಪ್ರೀತಿಯಮುತ್ತಾಗಿರ ಬೇಕೇ ವಿನಃ ಕಾಮಾಭಿಲಾಶೆಯ ಮುತ್ತಾಗಿರಬಾರದು" ಎಂದು ತಿಳಿಸಿರುವನು.

ತಂದೆ ತಾಯಿಗಳು "ಸುರಕ್ಷಿತವಾಗಿ ಚಾಲನೆ ಮಾಡು" ಎಂದು ಹೇಳುವದು "ಚಾಲನೆ"ಯ ಬಗ್ಗೆ ಒತ್ತಿ ಹೇಳುತ್ತಿರುವದಿಲ್ಲ. ಆದರೆ "ಸುರಕ್ಷತೆಯ" ಬಗ್ಗೆ ಹೇಳಲಾಗಿದೆ. ಆ ಯೌವನಸ್ಥನ ವಾಹನ ಚಾಲನೆಯನ್ನು ತಿಳಿದಿರುವ ತಂದೆ ತಾಯಿಗಳು ಅವನಿಗೆ ಚಾಲನೆಯ ಕುರಿತು, ಅಪ್ಪಣೆ ನೀಡುತ್ತಿಲ್ಲ. ಆದರೆ "ಸುರಕ್ಷತೆಯ" ಬಗ್ಗೆ ತಿಳಿಸುತ್ತಿರುವರು. ಪರಿಶುದ್ಧವಾದ ಮುತ್ತಿನ ಬಗ್ಗೆಯೂ ಇದೇ ಹೋಲಿಕೆಯಾಗಿದೆ. "ಮುತ್ತಿಡಿರಿ" ಎಂಬುವಂತದ್ದು ಅಪ್ಪಣೆಯಲ್ಲ ಆದರೆ ಈಗಾಗಲೇ ಸಮೂದಾಯದಲ್ಲಿ ಆಚರಣೆಯಲ್ಲಿರುವ ಪದ್ಧತಿಯನ್ನು ಮುಂದುವರಿಸುವ ಕುರಿತಾಗಿರುತ್ತದೆ.

1 ಕೊರಿಂಥ 11:2-16[4] ಸ್ತ್ರೀಯರು ಮುಸುಕನ್ನು ಹಾಕಿಕೊಳ್ಳುವ ವಿಷಯದಲ್ಲಿ ಪೌಲನು ತಿಳಿಸಿರುವ ಮೇಲಿನ ವಿಷಯಕ್ಕೆ ಹೋಲಿಸಿ ಚರ್ಚೆಮಾಡುವವರಾಗಿದ್ದಾರೆ. ಇದರಲ್ಲಿ ದೇವರ ಅಪ್ಪಣೆಯನ್ನು ಮೀರುವಂಥ ಸಂಗತಿಯೂ ಅಡಕವಾಗಿದೆ. ಈ ವಾಕ್ಯಭಾಗವು ಕ್ರೈಸ್ತರು ಈ ಪದ್ಧತಿಯನ್ನು ಅನುಸರಿಸಬೇಕು ಎಂದು ದೇವರು ಅಪ್ಪಣೆ ಮಾಡುತ್ತಿರುವನು ಎಂಬುದಾಗಿ ಹೇಳುತ್ತಿರುವದಿಲ್ಲ. ಗ್ರೀಕ್ ಮತ್ತು ರೋಮನ್ ಸ್ತ್ರೀಯರು, ಮತ್ತು ನಿಯರ್ ಈಸ್ಟ್ ಸ್ತ್ರೀಯರು ತಲೆಗೆ ಮುಸುಕನ್ನು ಧರಿಸುತ್ತಿರಲಿಲ್ಲ. ರಿಚರ್ಡ್ ಓಸ್ಟರ್ ರವರ ಹೇಳಿಕೆ,

> ಒಂದು ದೃಷ್ಟಿಯಲ್ಲಿ, ಬೈಬಲ್‌ನಲ್ಲಿ ಇರುವದೆಲ್ಲವು ಸಂಸ್ಕೃತಿಯನ್ನೇ ಬಿಂಬಿಸುತ್ತದೆ. ಮುತ್ತಿನ ಬಗ್ಗೆ, ದೀಕ್ಷಾಸ್ನಾನದ ಬಗ್ಗೆ ಅಥವಾ ಕ್ರೂಜೆಯ ಬಗ್ಗೆ, ಇರುವ ಸಿದ್ಧಾಂತಗಳನ್ನು ಆಚರಣೆಗಳನ್ನು, ವಿವಿಧವಾದಂಥಹ ಸಂಸ್ಕೃತಿಗಳಲ್ಲಿಯೂ, ಭಾಷೆಗಳಲ್ಲಿಯೂ, ಇರುವದನ್ನು ನಾವು ನೋಡುತ್ತೇವೆ. ಸಂಸ್ಕೃತಿಯಲ್ಲಿರುವದಕ್ಕೆ "ಒಳಪಡಬೇಕು" ಅಥವಾ ಸದಾಕಾಲ ಇರಬೇಕು ಎಂಬುದು ವಿಹಿತವಲ್ಲ. ಯಾಕೆಂದರೆ ಅನೇಕ ಮೂಲಭೂತ ಸಿದ್ಧಾಂತಗಳು ವಾಕ್ಯಗಳಲ್ಲಿ "ಸಂಸ್ಕೃತಿಯ ಅಯ ಕಟ್ಟಿನದಾಗಿರುತ್ತದೆ." ಹೊಸ ಒಡಂಬಡಿಕೆಯಲ್ಲಿರುವ ಈ ಅಂಶವು ನಿರಂತರ ಎಂಬುದಾಗಿ ಸೂಚಿಸದೆಯೂ ಹೊಸ ಒಡಂಬಡಿಕೆಯಲ್ಲಿರುವ ಎಲ್ಲವೂ ನಿರಂತರವಲ್ಲ ಎಂಬುದಾಗಿಯೂ ಸೂಚಿಸುತ್ತದೆ. ಆದರೆ, ಇಲ್ಲ ನನ್ನ ತಾತ್ಪರ್ಯವೇನೆಂದರೆ, ನಾವು ಎಲ್ಲದಕ್ಕೂ ಒಳಪಡಬೇಕು, ಅಥವಾ ಒಳಪಡಬಾರದು ಎಂಬುದಾಗಿ ಇರದೆ, ಮತ್ತು ಹೊಸ ಒಡಂಬಡಿಕೆಯಲ್ಲಿರುವ ಸತ್ಯ ಮತ್ತು ಸಂಸ್ಕೃತಿಗೆ ಮೂಲವಾಗಿಯೂ ಇರುವದಿಲ್ಲ. ಯಾಕೆಂದರೆ ಬೈಬಲಿನ ಸಕಲ ಸತ್ಯಗಳು, ಸಂಸ್ಕೃತಿಯ ಬಟ್ಟೆಯಿಂದ ಮುಚ್ಚಲ್ಪಟ್ಟಿದೆ, ಆದುದರಿಂದ ನಾವು ಯಾವುದನ್ನು

ಸಂಸ್ಕೃತಿ ಎಂದು ಹೇಳುತ್ತೇವೋ ಅದಕ್ಕೆ ನವೀನ ಪ್ರಪಂಚವು ಒಳಗಾಗಿರುತ್ತದೆ.[5]

## ಸಂಪ್ರದಾಯಗಳು ಹಾಗೂ ಪ್ರಕಟನೆ

ಸ್ತ್ರೀ ಪುರುಷರ ನಡುವೆ ದೇವರು ಉಂಟುಮಾಡಿರುವ ಅನ್ಯೋನ್ಯತೆಯ ಸಂಬಂಧವನ್ನು ನಾವು ತಿಳಿದುಕೊಳ್ಳಲು, ಪ್ರಕಟನೆಯ ಅವಶ್ಯವಿರುತ್ತದೆ. ಅನುಭವ, ಪದ್ಧತಿ ಮತ್ತು ನ್ಯಾಯವಾದ ಮಾತುಗಳು ಸತ್ಯವಾದವು ಎಂಬುದಾಗಿ ತಿಳಿದರೂ ದೇವರ ಪ್ರಕಟಿತವಾದ ವಾಕ್ಯಗಳಲ್ಲಿ ಮಾತ್ರ ಆಳವಾದ ಬುನಾದಿ ಇರುತ್ತದೆ.

ಸ್ತ್ರೀಯರ ಕುರಿತಾದ ವಾಕ್ಯಗಳಿಂದ ಈ ವಿಷಯವನ್ನು ಕೂಲಕುಶವಾಗಿ ಪರಿಶೀಲನೆ ಮಾಡೋಣ. ಸಂದೇಹಗಳನ್ನು ವ್ಯರ್ಥವಾದ ಆಲೋಚನೆಯನ್ನು ಮತ್ತು ಇದೇ ರೀತಿ ಇರಬಹುದು ಎಂಬ ಆಲೋಚನೆಯನ್ನು ತಡೆಗಟ್ಟೋಣ. ಈ ರೀತಿ ಮಾಡುವಂಥದ್ದು ಮಾನವನ ಆಲೋಚನೆಯಿಂದ, ದೇವರ ಆಲೋಚನೆಗೆ ಹೋಗುವಂತಿರುತ್ತದೆ. ಆದರೆ ಅದು ಸಾಧ್ಯವಾಗುವದಿಲ್ಲ. ಭಾವನೆಗಳಿಂದಲೂ, ಗೌರವದಿಂದಲೂ ಇರುವ ಈ ಅಧ್ಯಾಯನವನ್ನು ನಾವು ಸರಳವಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ. ಈ ಪಾಠದ ಕುರಿತಾಗಿ "ದೇವರು ಏನನ್ನು ಹೇಳುತ್ತಿರುವನು ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕು?" ಇದು ನಮ್ಮ ಗುರಿಯಾಗಿದ್ದರೆ, ಅಂತ್ಯದಲ್ಲಿ ಸತ್ಯವನ್ನು ಕಾಣುತ್ತೇವೆ.

ಅನೇಕ ವಿದ್ವಾಂಸರು ಹಾಗೂ ಪಂಡಿತರು ಈ ವಿಷಯದಲ್ಲಿ ಸಮನ ಮನಸ್ಕರಾಗದೆ ಇರುವದರಿಂದ, ನಾವು ಸತ್ಯವನ್ನು ಸಂಶೋಧಿಸದೆ ಬಾರದು ಎಂಬ ಕಾರಣವನ್ನು ನೀಡಬಾರದು. ಈ ವಿಷಯವು ನಮ್ಮನ್ನು ಸೋಲುವಂತೆ ಮಾಡಿದರೆ, ನಾವು ಯಾವುದೆ ವಿಷಯಗಳ ಬಗ್ಗೆ ಸತ್ಯವನ್ನು ಅರಿಯಲು ಅಸಾಧ್ಯವಾಗುತ್ತದೆ. ಸಕಲ ವಿಷಯಗಳು ವಿದ್ವಾಂಸರಿಂದ ತುಲನೆಗೊಂಡು, ವ್ಯತ್ಯಾಸವಾದ ಚರ್ಚೆಗಳು ಉಂಟಾಗಿರುತ್ತವೆ. ಇದನ್ನು ಅಧ್ಯಾಯನ ಮಾಡುವಾಗ, ಇತರರ ಬಗ್ಗೆ ಪ್ರೀತಿಯ ವಿಶ್ವಾಸವನ್ನು ಹೊಂದಿಕೊಳ್ಳಬೇಕು. ಇನ್ನೊಬ್ಬ ಮನುಷ್ಯನ ಮನಸ್ಸಾಕ್ಷಿಯ ಮೇಲೆ ನಮ್ಮ ಸಮಾಲೋಚನೆಯು ಅವಲಂಭಿತವಾಗಿರಬಾರದು. ಸಾಮ್ಯತೆಯನ್ನು ಕಾಪಾಡಿಕೊಳ್ಳುವದಕ್ಕೋಸ್ಕರ, ನಮ್ಮ ಅರ್ಹತೆಗಳನ್ನು ಸರಳೀಕರಿಸಬೇಕು. ಇತರರ ಕ್ರಿಯೆಗಳು, ದೇವರೊಂದಿಗೆ ಇರುವ ನಮ್ಮ ಸಂಬಂಧದ ಮೇಲೆ ಯಾವುದೇ ಪರಿಣಾಮವನ್ನು ಬೀರದೆ ಇರುವಾಗ, ನಾವು ಅನುಸರಿಸಿಕೊಳ್ಳಬೇಕು.

## ಮುಕ್ತಾಯ

ಯೇಸುವಿನ ವಾಕ್ಯದಲ್ಲಿಯೇ ನಾವು ಮುಂದುವರಿಯುವುದಾದರೆ, ನಾವು ಸತ್ಯವನ್ನು ಅರಿಯುತ್ತೇವೆ (ಯೋಹಾನ 8:31, 32). ನಮ್ಮ ಸಕಲ ಧಾರ್ಮಿಕ ವಿಷಯಗಳಲ್ಲಿ ಇದೆ ನಮ್ಮ ಮಾರ್ಗದರ್ಶನವಾಗಿರಬೇಕು.

ಸ್ತ್ರೀ ಪುರುಷರ ಕುರಿತಾದ ದೇವರ ಚಿತ್ತವನ್ನು ಅರಿಯಲು, ದೇವರ ವಾಕ್ಯವನ್ನು ತೆರೆದ ಮನಸ್ಸಿನಿಂದ ಧ್ಯಾನಿಸುವುದೇ ನಮಗೆ ಸರಿಯಾದ ಮಾರ್ಗದರ್ಶನವಾಗಿದೆ. ಸ್ತ್ರೀಯರ ಕುರಿತಾದ ಸಂಪ್ರದಾಯಗಳನ್ನು ಮತ್ತು ದೇವರು ನೇಮಿಸಿದ ಅಪ್ಪಣೆಗಳನ್ನು ಯಥಾರ್ಥವಾಗಿ ಅವಲೋಕಿಸೋಣ. ಸತ್ಯವು, ಮಾನವರ ಆಜ್ಞೆಯಲ್ಲಿಯಾಗಲೀ, ಸಂಪ್ರದಾಯಗಳಲ್ಲಾಗಲೀ, ಇರುವದಿಲ್ಲ (ತೀತ 1:14).

---

ಟಿಪ್ಪಣಿಗಳು

[1]*The American Heritage Dictionary,* 3d ed., s.v. "custom." [2]Ibid., s.v. "tradition." [3]Everett and Nancy Ferguson, "NT Teaching on the Role of Women in the Assembly,"

*Gospel Advocate* (October 1990): 30. [4]1 ಕೊರಿಂಥ 11ರಲ್ಲಿ ನಮೂದಿಸಿರುವ ಸ್ತ್ರೀ ತಲೆಯನ್ನು ಮುಸುಕಿನಿಂದ ಮುಚ್ಚಿಕೊಳ್ಳುವ ವಿಷಯಕ್ಕಾಗಿ J. W. *ಮಾರ್ಕ್* ಗಾರ್ವಿ 1 ಕೊರಿಂಥ 11 ಅದರ ಹೆಚ್ಚಿನ ಪ್ರತಿಯಲ್ಲಿ ದೊರಕುತ್ತದೆ. [5]Richard E. Oster, Jr., "Culture or Binding Principle - A Study of Head Coverings, Hairstyles, Etc. (1 Corinthians 11:16)," *Harding University 67th Annual Lectureship* (1990): 428.